## ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಆಳಂದ.

ಸಿ.ಸಿ.ನಂಃ 4512/2021 ಸಿ.ಡಬ್ಲ್ಯೂ –1 ಪಿ.ಡಬ್ಲ್ಯೂ -4

| | | |
|---|---|---|
| ಹೆಸರು | ಃ | ಶರಣಬಸಪ್ಪ |
| ತಂದೆಃ ಗಂಡ | ಃ | ಲಾಡಪ್ಪ ಬಾಳೆ |
| ವಯಸ್ಸು | ಃ | ೪೧ ವರ್ಷ |
| ಉದ್ಯೋಗ | : | ಎಲೆಕ್ಟ್ರಿಶನ್ |
| ವಾಸಸ್ಥಳ | ಃ | ಆಳಂದ |

ದಿನಾಂಕಃ ೨೦.೧೧.೨೦೨೪

ಸತ್ಯ ಪ್ರತಿಜ್ಞೆಯ ಮೇರೆಗೆ

---

**ಮುಖ್ಯ ವಿಚಾರಣೆ ಮಾನ್ಯ ಸಸಅ ಅವರಿಂದ ಃ**

ಚಾಸಾ-12 ನನ್ನ ಧರ್ಮಪತ್ನಿ, ಚಾಸಾ-13 ನನ್ನ ಅಳಿಯ, ಚಾಸಾ-14 ನನ್ನ ಚಿಕ್ಕಪ್ಪನ ಮಗ, ಚಾಸಾ-2 ರಿಂದ 11 ರವರ ಪರಿಚಯ ಇರುತ್ತದೆ.

ದಿ.೨೫.೧೨.೨೦೧೯ ರಂದು ಎಳ್ಳ ಅಮಾವಾಸೆ ದಿನದಂದು ನಾವು ನಮ್ಮ ಜಮೀನಿಗೆ ಹೋಗಿದ್ದೆವು, ನಾವು ಜಮೀನಿಗೆ ಹೋಗಿ ಬರುವಷ್ಟರಲ್ಲಿ ಮನೆಯ ಬೀಗ ಮುರಿದಿತ್ತು, ಒಳಗಡೆ ಹೋಗಿ ನೋಡಲಾಗಿ ಅಲಮಾರಿ ಕೀಲಿ ಮುರಿದು ಓಪನ್ ಆಗಿತ್ತು, ನಾವು ಸದರಿ ೮ ವರೆ ತೊಲೆ ಬಂಗಾರವನ್ನು ನಮ್ಮ ಬೀರುವಿನಲ್ಲಿಟ್ಟಿದ್ದೆವು, ಅದು ಇರಲಿಲ್ಲ ಮತ್ತು ರೂ.೧,೦೫,೦೦೦/- ಹಣ ಇಟ್ಟಿದ್ದೆವು ಅವು ಸಹ ಇರಲಿಲ್ಲ, ನಂತರ ನಾನು ಪೋಲಿಸ್ ಠಾಣೆಗೆ ಹೊಗಿ ನಮ್ಮ ಮನೆ ಬೀಗ ಒಡೆದು ಯಾರೋ ಕಳ್ಳತನ ಮಾಡಿರುತ್ತಾರೆ ಎಂದು ಫಿರ್ಯಾದಿ ಸಲ್ಲಿಸಿರುತ್ತೇನೆ. ನಾನು ಫಿರ್ಯಾದಿ ಸಲ್ಲಿಸಿದ ನಂತರ ಪೋಲಿಸರು ಘಟನಾ ಸ್ಥಳಕ್ಕೆ ಬಂದು ಪಂಚನಾಮೆಯನ್ನು ಜರುಗಿಸಿರುತ್ತಾರೆ. ನಾನು ಫಿರ್ಯಾದಿ ಸಲ್ಲಿಸಿದ ಎರಡು ವರ್ಷಗಳ ನಂತರ ಸಿ,ಪಿ,ಐ. ರವರು ನನ್ನನ್ನು ಠಾಣೆಗೆ ಕರೆಯಿಸಿ ಬಂಗಾರವನ್ನು ತೋರಿಸಿ ನಾಲ್ಕು ತೊಲೆ ಬಂಗಾರವನ್ನು ನೀಡಿರುತ್ತಾರೆ ಮತ್ತು ಆರೋಪಿತರನ್ನು ತೋರಿಸಿರುತ್ತಾರೆ. ಸಾಕ್ಷಿ ನ್ಯಾಯಾಲಯದ ಮುಂದೆ ಇರುವ ಆರೋಪಿತರನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿ ಫಿರ್ಯಾದಿಯಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿರುವುದರಿಂದ, ಫಿರ್ಯಾದಿಯನ್ನು ನಿಪಿ-೩ ಎಂದು, ಸಹಿಯನ್ನು ನಿಪಿ-೩(ಎ) ಎಂದು ಗುರುತಿಸಲಾಯಿತು. ಬಂಗಾರವನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ಭಾವಚಿತ್ರದಲ್ಲಿರುವ ಬಂಗಾರವನ್ನು ನೋಡಿ ಗುರುತಿಸಿರುತ್ತಾರೆ.

(ಈ ಹಂತದಲ್ಲಿ ಮಾನ್ಯ ಸ.ಸ.ಅ.ರವರು ಮುಂದುವರೆದ ಮುಖ್ಯ ವಿಚಾರಣೆಗಾಗಿ ಸಮಯಾವಕಾಶ ಕೋರಿದ್ದರಿಂದ ನೀಡಲಾಯಿತು.)

ಓ.ಹೇ.ಕೇ.ಸರಿ ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ.ಆಳಂದ